2015 ಕ.ತೀ.ವ 433

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪ್ರದೀಪ್ ಡಿ. ವೈಂಗಣಕರ

## ಓರಿಯಂಟಲ್ ಇನ್ಶೂರೆನ್ಸ್ ಕಂ., ಲಿ., –ವಿರುದ್ಧ– ಶ್ರೀಮತಿ ಸಾವಿತ್ರಿ ಹುಡ್ಗೆ ಮತ್ತು ಇನ್ನೊಬ್ಬರು*

ಮೋಟಾರು ವಾಹನ ಅಧಿನಿಯಮ ಕಲಂ 173(1)ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.

ತನ್ನ ಪತಿಯೊಂದಿಗೆ ಟ್ಯಾಕ್ಸಿಯಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಟ್ಯಾಕ್ಸಿ ಚಾಲಕನ ದುಡುಕು ಹಾಗೂ ನಿರ್ಲಕ್ಷ್ಯತನದ ಚಾಲನೆಯಿಂದಾಗಿ ಮರವೊಂದಕ್ಕೆ ಗುದ್ದಿದ ಪರಿಣಾಮ ತೀವ್ರತರವಾಗಿ ಗಾಯಗೊಂಡ ಪರಿಣಾಮ ನ್ಯಾಯಾಧಿಕರಣದಲ್ಲಿ ಆಕೆ ಸಲ್ಲಿಸಿದ ಅರ್ಜಿಯು ಪುರಸ್ಕೃತಗೊಳ್ಳುತ್ತದೆ. ನ್ಯಾಯಾಧಿಕರಣವು ನಿರ್ಧರಿಸಿದ ಪರಿಹಾರ ಮೊತ್ತವಾದ 11,42,300/– ಹೆಚ್ಚಿಸುವಂತೆ ಆಕೆಯು ಸರಿ ಮೇಲ್ಮನವಿ ಸಲ್ಲಿಸಿದ್ದಾರೆ, ಪರಿಹಾರ ಮೊತ್ತವು ಹೆಚ್ಚೆಂದು ನ್ಯಾಯಾಧಿಕರಣದ ಐತೀರ್ಪನ್ನು ಬದಿಗಿರಿಸುವಂತೆ ಕೋರಿ ವಿಮಾಕಂಪನಿಯು ಮತ್ತೊಂದು ಮೇಲ್ಮನವಿಯನ್ನು ಸಲ್ಲಿಸಿದೆ.

ವಿಮಾಕಂಪನಿಯವರು ಅಪಘಾತಕ್ಕೊಳಪಟ್ಟ ವಾಹನವು ತಾತ್ಕಾಲಿಕ ನೋಂದಣಿಯನ್ನು ಹೊಂದಿದ್ದು ನಿಗದಿತ 30 ದಿನಗಳನ್ನು ಮೀರಿತ್ತೆಂಬುದಕ್ಕೆ ಯಾವುದೇ ಸಾಕ್ಷಿಯನ್ನು ಒದಗಿಸಿಲ್ಲ. ಈ ಕಾರಣದಿಂದ ವಿಮಾಕಂಪನಿಯು ಪರಿಹಾರ ಮೊತ್ತವನ್ನು ನೀಡುವ ಹೊಣೆಯನ್ನು ಹೊರಬೇಕಿರುತ್ತದೆ. ವಿವಿಧ ಶೀರ್ಷಿಕೆಗಳಡಿಯಲ್ಲಿ ಪರಿಹಾರವನ್ನು ನಿರ್ಧರಿಸಿದ ಉಚ್ಚ ನ್ಯಾಯಾಲಯವು ಮೊತ್ತವನ್ನು 11,42,300/– ರೂ.ಗಳಿಂದ 20,00,100/– ರೂ.ಗಳಿಗೆ ಹೆಚ್ಚಿಸುತ್ತಾ ಸದರಿ ಮೇಲ್ಮನವಿಗಳನ್ನು ವಿಲೇಖಿಸಿದೆ.

*ಎಂ.ಎಫ್.ಎ. ಸಂ. 1225/2011 (ಎಂವಿ) ಮತ್ತು ಇದರೊಂದಿಗೆ ಇತರೆ, ದಿನಾಂಕ: 19ನೇ ಮಾರ್ಚ್, 2014.

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. 2009 ಎಸಿಜೆ 1298*
*ಸರಳ ವರ್ಮ* *(ಉಲ್ಲೇ) 12*

ಎಂ.ಎಫ್.ಎ. ಸಂ. 1225/2011 (ಎಂವಿ)
ಅರ್ಜಿದಾರರ ಪರ : ಶ್ರೀ ಎ.ಎನ್.ಕೃಷ್ಣಸ್ವಾಮಿ – ವಕೀಲರು;
ಒಂದನೇ ಪ್ರತ್ಯರ್ಜಿದಾರರ ಪರ : ಶ್ರೀ ಕೆ.ನಾಗರಾಜ – ವಕೀಲರು
ಎರಡನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತಿನಿಧಿಸಿರುವುದಿಲ್ಲ

ಎಂ.ಎಫ್.ಎ. ಸಂಖ್ಯೆ 8863/2010 :
ಅರ್ಜಿದಾರರ ಪರ : ಶ್ರೀ ಕೆ.ನಾಗರಾಜ – ವಕೀಲರು
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಎ.ಎನ್.ಕೃಷ್ಣಸ್ವಾಮಿ – ವಕೀಲರು
2ನೇ ಪ್ರತ್ಯರ್ಜಿದಾರರಿಗೆ ಜಾರಿಮಾಡಲಾಗಿದೆ ಮತ್ತು ಪ್ರತಿನಿಧಿಸಿರುವುದಿಲ್ಲ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್:**

111ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಬೆಂಗಳೂರು (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ) ಇವರು ಎಂ.ವಿ.ಸಿ. ಸಂ. 4979/2008ರಲ್ಲಿ, 17ನೇ ಜೂನ್, 2010ನೇ ದಿನಾಂಕದ ಒಂದೇ ತೀರ್ಪು ಮತ್ತು ಐತೀರ್ಪಿನ ವಿರುದ್ಧ ವಿಮಾಕಂಪನಿ ಮತ್ತು ಗಾಯಗೊಂಡ ಕ್ಲೇಮುದಾರರು ಅನುಕ್ರಮವಾಗಿ ಸಲ್ಲಿಸಿದ್ದ ಎರಡು ಅಪೀಲುಗಳನ್ನು ನಿರ್ದೇಶಿಸಲಾಗಿರುತ್ತದೆ.

2. ನಷ್ಟ ಭರ್ತಿಗಾಗಿ ನಿರ್ದೇಶಿಸಿರುವ ಸದರಿ ಐತೀರ್ಪು, ನ್ಯಾಯಯುತ ವಾಗಿರುವುದಿಲ್ಲವೆಂಬ ಆಧಾರದ ಮೇಲೆ ಇದನ್ನು ರದ್ದುಪಡಿಸಬೇಕೆಂದು

ವಿಮಾಕಂಪನಿಯು ಅರ್ಜಿಯನ್ನು ಸಲ್ಲಿಸಿರುವಾಗ, ಗಾಯಗೊಂಡ ಕ್ಲೇಮುದಾರರು, ನ್ಯಾಯಾಧಿಕರಣವು ನೀಡಿರುವ ನಷ್ಟ ಪರಿಹಾರ ತುಂಬಾ ಕಡಿಮೆ ಮೊತ್ತದ್ದಾಗಿದ್ದು, ಅದನ್ನು ಹೆಚ್ಚಿಸಬೇಕಾದ ಅವಶ್ಯಕತೆಯಿದೆಯೆಂಬ ಅಧಾರದ ಮೇಲೆ ಅಪೀಲನ್ನು ಸಲ್ಲಿಸಿರುತ್ತಾರೆ; ಹಾಗಾಗಿ, ಉಭಯ ಪಕ್ಷಕಾರರು, ನ್ಯಾಯಾಧಿಕರಣವು ಹೊರಡಿಸಿರುವ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನ ಮಾರ್ಪಟಿಗೆ ಕೋರಿಕೆಯನ್ನು ಸಲ್ಲಿಸಿರುತ್ತಾರೆ.

3. ಕ್ಲೇಮುದಾರರು ಅಪಘಾತದ ಸಮಯದಲ್ಲಿ ತನಗೆ 28 ವರ್ಷ ವಯಸ್ಸಾಗಿತ್ತು. ಒಂದು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಾ ತಿಂಗಳಿಗೆ 6,000/– ರೂ.ಗಳನ್ನು ಗಳಿಸುತ್ತಿದ್ದೆ ಎಂದು ತಿಳಿಸಿರುವುದು ಸಂಕ್ಷಿಪ್ತವಾಗಿ ವಾಸ್ತವಾಂಶಗಳಾಗಿರುತ್ತವೆ. ಈಕೆ ಅಪಘಾತಕ್ಕೆ ಮೊದಲು ಆರೋಗ್ಯವಾಗಿದ್ದಳು. 21.02.2008ರಂದು ಮುಂಜಾನೆ ಸುಮಾರು 04.45ರ ಸಮಯದಲ್ಲಿ, ಡೆಕ್ಕನ್ ಕಾರ್ ರೆಂಟರ್ಸ್‌ನಿಂದ ಕೆಎ–05/ಟಿಆರ್‌ಎ–2713 ಸಂಖ್ಯೆಯ ಇಂಡಿಕಾ ಕಾರನ್ನು ಬಾಡಿಗೆಗೆ ಪಡೆದುಕೊಂಡು ನಿಧಾನವಾಗಿ ಮತ್ತು ಎಚ್ಚರಿಕೆಯಿಂದ ಕ್ಲೇಮುದಾರರು ತನ್ನ ಪತಿಯೊಂದಿಗೆ ಪ್ರಯಾಣ ಮಾಡಿರುತ್ತಾರೆ. ಸಂಡೂರಿನಿಂದ ಬೆಂಗಳೂರಿಗೆ ಬರುವಾಗ, ರಾಷ್ಟ್ರೀಯ ಹೆದ್ದಾರಿ–4ರ ತುಮಕೂರಿನ ಬೈಪಾಸ್‌ನಲ್ಲಿನ ಬಟವಾಡಿಯಲ್ಲಿ ಸದರಿ ಕಾರಿನ ಚಾಲಕನು ಕಾರನ್ನು ವೇಗವಾಗಿ ಮತ್ತು ಅಡ್ಡಾದಿಡ್ಡಿಯಾಗಿ ಚಾಲನೆ ಮಾಡಿ ಲಾರಿಗೆ ಢಿಕ್ಕಿ ಹೊಡೆದಿರುತ್ತಾರೆ. ಇದರಿಂದ ಈಕೆಗೆ ಹಲವಾರು ಗಾಯಗಳು ಅಂದರೆ ಸಿ–5ರ ಮುಂದಣ–ಕೈಗಣ ತುದಿಪಲಕದ ಮುರಿತದೊಂದಿಗೆ ಬೆನ್ನುಮೂಳೆ ಅಂದರೆ ಕುತ್ತಿಗೆಯ ಮೂಳೆ ಸಿ–5 ಮತ್ತು 6, ಸಿ–5ರ ಮೇಲೆ ಸಿ–6ರ ದರ್ಜೆ 111 ಲಿಸ್ಥೆಸೆ ಗಾಯ ಉಂಟಾಗಿದ್ದು, ದೇಹದ ಸಿ–5ರ ಹಿಂಬಾಗು ನಡೆಯ ಸಿ–5ರ ಎಡಪೊರೆಯ ಮುರಿತ ಮತ್ತು ಇತರ ಗಾಯಗಳು ಉಂಟಾಗಿವೆ ಮತ್ತು ಸೊಂಟದ ಕೆಳಭಾಗ ತನ್ನ ಸ್ಪರ್ಶ ಸಂವೇದನೆಯನ್ನು ಮತ್ತು ಕೈಗಳು ತಮ್ಮ ಚಲನೆಯನ್ನು ಕಳೆದುಕೊಂಡಿರುತ್ತವೆ. ಕೂಡಲೇ ಆಕೆಯನ್ನು ಬಿ.ಜಿ.ಎಸ್ ಗ್ಲೋಬಲ್ ಆಸ್ಪತ್ರೆ ಮತ್ತು ಜಿಲ್ಲಾ ಅಸ್ಪತ್ರೆ, ತುಮಕೂರು ಮತ್ತು ಇತರೆ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಯಿತು.

4. ರಸ್ತೆ ಅಪಘಾತದಿಂದ ತನಗೆ ಶಾಶ್ವತ ಅಂಗವಿಕಲತೆಯನ್ನು ಒಳಗೊಂಡಂತೆ ಮೇಲೆ ಹೇಳಿದ ಗಂಭೀರ ಸ್ವರೂಪದ ಗಾಯಗಳುಂಟಾಗಿದ್ದು, ಸದರಿ ಗಾಯಗಳ

ಚಿಕಿತ್ಸೆಗಾಗಿ, ವೈದ್ಯಕೀಯ ವೆಚ್ಚಗಳ ಜೊತೆಗೆ, ಸಾರಿಗೆ, ಪೌಷ್ಠಿಕ ಆಹಾರ ಮತ್ತು ಪಾಲನಾ ವೆಚ್ಚಗಳಿಗಾಗಿ ಗಣನೀಯ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿರುತ್ತೇನೆ. ಆದ್ದರಿಂದ ತನಗೆ ಸೂಕ್ತವಾಗಿ ಪರಿಹಾರವನ್ನು ನೀಡಬೇಕಾಗಿರುತ್ತದೆ ಎಂಬುದು ಗಾಯಗೊಂಡ ಕ್ಲೇಮುದಾರರ ವಾದವಾಗಿರುತ್ತದೆ.

5. ಅಪಘಾತದಲ್ಲಿ ಉಂಟಾದ ಗಾಯಗಳ ಕಾರಣದಿಂದ, ಗಾಯಗೊಂಡ ಕ್ಲೇಮುದಾರರು, ಅಪರಾಧಕ್ಕೆ ಗುರಿಯಾಗಿರುವ ಮಾಲೀಕ ಮತ್ತು ವಿಮಾಕಂಪನಿಯ ವಿರುದ್ಧ ದಾವೆ ಹೂಡಿ, 50,000 ರೂ.ಗಳ ಮೊಬಲಗಿನ ಪರಿಹಾರವನ್ನು ಕೋರಿ ನ್ಯಾಯಾಧಿಕರಣದ ಎದುರು ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಕ್ಲೇಮು ಅರ್ಜಿಯು 2010ರ ಜೂನ್ 17ರಂದು ನ್ಯಾಯಾಧಿಕರಣದ ಎದುರು ಪರಿಗಣನೆಗಾಗಿ ಬಂದಿತ್ತು. ನ್ಯಾಯಾಧಿಕರಣವು, ಕಡತದಲ್ಲಿ ಲಭ್ಯವಾದ ಸೂಕ್ತ ಸಂಗತಿಗಳನ್ನು ಪರಿಗಣಿಸಿದ ತರುವಾಯ ಮತ್ತು ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಪರಿಶೀಲಿಸಿದ ತರುವಾಯ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ, ಹಣವನ್ನು ಸಂದಾಯ ಮಾಡುವ ದಿನಾಂಕದವರೆಗೂ ವರ್ಷಕ್ಕೆ ಶೇ.6ರಷ್ಟು ಬಡ್ಡಿ ದರದೊಂದಿಗೆ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ 11,42,300/- ರೂ.ಗಳ ಮೊಬಲಗನ್ನು ನೀಡಿ ಕ್ಲೇಮು ಅರ್ಜಿಯನ್ನು ಭಾಗಶಃ ಅಂಗೀಕರಿಸಿರುತ್ತದೆ. ನ್ಯಾಯಾಧಿಕರಣವು ಐತೀರ್ಪು ನೀಡಿರುವ ಪರಿಹಾರದ ಪ್ರಮಾಣವು, ಗಾಯಗೊಂಡ ಕ್ಲೇಮುದಾರರಿಗೆ ಸಮಾಧಾನವನ್ನು ಕೊಟ್ಟಿರುವುದಿಲ್ಲವಾದ್ದರಿಂದ, ಪರಿಹಾರವನ್ನು ಹೆಚ್ಚಿಸಬೇಕೆಂದು ಕೋರಿ ಈ ನ್ಯಾಯಾಲಯದ ಎದುರು ಅಪೀಲು ಸಲ್ಲಿಸಿರುತ್ತಾರೆ. ಬದ್ಧತೆಯನ್ನು ಹೊರಿಸಿ, ಐತೀರ್ಪು ನೀಡಲಾದ ಪರಿಹಾರದ ಮೊಬಲಗಿನ ಪ್ರಮಾಣದಿಂದ ಬಾಧಿತವಾಗಿರುವ ವಿಮಾಕಂಪನಿಯು ಸಹ, ನ್ಯಾಯಾಧಿಕರಣವು ಹೊರಡಿಸಿರುವ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಮಾರ್ಪಡುಗೊಳಿಸಿ ಅದನ್ನು ರದ್ದುಪಡಿಸಲು ಕೋರಿ ಈ ನ್ಯಾಯಾಲಯದ ಎದುರು ಅಪೀಲನ್ನು ಸಲ್ಲಿಸಿರುತ್ತದೆ.

6. ನಾವು ಸಾಕಷ್ಟು ಸಮಯ ನೀಡಿ, ವಿಮಾಕಂಪನಿಯ ಮಾನ್ಯ ವಕೀಲರು ಮತ್ತು ಗಾಯಗೊಂಡ ಕ್ಲೇಮುದಾರರ ಪರ ಹಾಜರಾದ ಮಾನ್ಯ ವಕೀಲರು ವಾದಿಸಿದ ವಾದವನ್ನು ಆಲಿಸಿರುತ್ತೇವೆ.

7. ಶ್ರೀ ಎ.ಎನ್.ಕೃಷ್ಣಸ್ವಾಮಿ, ವಿಮಾಕಂಪನಿಯ ಪರ ಹಾಜರಾದ ಮಾನ್ಯ ವಕೀಲರು, ನಷ್ಟಭರ್ತಿ ಮಾಡಲು ವಿಮಾಕಂಪನಿಗೆ ನ್ಯಾಯಾಧಿಕರಣವು ನಿರ್ದೇಶಿಸಿ ಐತೀರ್ಪು ನೀಡಿರುವುದು ಸಂಪೂರ್ಣವಾಗಿ ದೋಷಯುಕ್ತವಾಗಿದೆಯೆಂದೂ ಹಾಗೂ ಈ ಐತೀರ್ಪು, ಮೋಟಾರು ವಾಹನಗಳ ಅಧಿನಿಯಮದ 39 ಮತ್ತು 43ನೇ ಪ್ರಕರಣಗಳಡಿಯಲ್ಲಿ ಆಜ್ಞಾಪಕವಾಗಿರುವಂಥ ನೋಂದಣಿಯನ್ನು ಪ್ರಶ್ನಿತ ವಾಹನವು ಹೊಂದಿರುವುದಿಲ್ಲವೆಂಬುದನ್ನು ನ್ಯಾಯಾಧಿಕರಣವು ಗಮನಿಸಲೇ ಬೇಕಾಗಿತ್ತೆಂಬ ಕಾರಣದಿಂದ ರದ್ದುಪಡಿಸಲು ತಕ್ಕುದಾಗಿರುತ್ತದೆಂದು ಭಾವಾವೇಶದಿಂದ ನಿವೇದಿಸಿಕೊಂಡಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ, ಅಪರಾಧಕ್ಕೆ ಗುರಿಯಾಗಿರುವ ವಾಹನದ ತಾತ್ಕಾಲಿಕ ನೋಂದಣಿಯನ್ನು 10.01.2008ರಂದು ಪಡೆಯಲಾಗಿರುತ್ತದೆ ಮತ್ತು ಅದು ಸೂಕ್ತ ಉಪಬಂಧಗಳ ಅನುಸಾರವಾಗಿ ತಾತ್ಕಾಲಿಕ ನೋಂದಣಿ ಮಾಡಿದ ದಿನಾಂಕದಿಂದ 30 ದಿನಗಳ ಅವಧಿಯವರೆಗೆ ಮಾತ್ರ ಸಿಂಧುವಾಗಿರುತ್ತದೆ. ಈ ನಿಯಮದ ಪ್ರಕಾರ ಸದರಿ ನೋಂದಣಿಗೆ 10.02.2008ರಂದು ಅವಧಿ ಮುಕ್ತಾಯವಾಗಿರುತ್ತದೆ. ಆದರೆ ಅವಧಿ ಮೀರಿದ 30 ದಿವಸಗಳ ತರುವಾಯ, ಪ್ರಶ್ನಿತ ಅಪಘಾತವು 21.02.2008ರಂದು ಸಂಭವಿಸಿರುತ್ತದೆ. ಆದ್ದರಿಂದ, ನ್ಯಾಯಾಧಿಕರಣವು, ಮೋಟಾರು ವಾಹನಕ್ಕೆ ನೋಂದಣಿಯೇ ಇಲ್ಲದಿರುವಾಗ ಅಂಥ ನಿರ್ಣಯಕ್ಕೆ ಬರಬಾರದೆಂದು ಮತ್ತು ವಿಮಾಕಂಪನಿಗೆ ಬದ್ಧತೆಯ ಬಂಧನವನ್ನು ತೊಡಿಸಬಾರದೆಂದು ವಾದಿಸಿರುತ್ತಾರೆ. ಮುಂದುವರೆದು, ಅವರು, ನ್ಯಾಯಾಧಿಕರಣವು, ಮೋಟಾರು ವಾಹನಗಳ ಅಧಿನಿಯಮದ 39ನೇ ಪ್ರಕರಣದ ಪ್ರಕಾರ ವಾಹನವು ನೋಂದಣಿಯಾಗದಿದ್ದಲ್ಲಿ, ಅದನ್ನು ಯಾವುದೇ ಪ್ರದೇಶದಲ್ಲಿ ಚಾಲನೆ ಮಾಡುವಂತಿಲ್ಲವೆಂಬುದನ್ನು ಗಮನಿಸಲೇಬೇಕಾಗುತ್ತದೆ. ಅಲ್ಲದೆ, ನ್ಯಾಯಾಧಿಕರಣವು, ಸಾರಿಗೆ ವಾಹನವೆಂದು ನೋಂದಾಯಿಸದ ಹೊರತು ಯಾವುದೇ ವಾಹನವನ್ನು ಸಾರಿಗೆ ವಾಹನವೆಂದು ಪರಿಗಣಿಸಬಾರದೆಂಬುದನ್ನು ಗಮನಿಸಬೇಕಾಗುತ್ತದೆ ಮತ್ತು ಮೋಟಾರು ವಾಹನವನ್ನು ನೋಂದಣಿ ಮಾಡಿಸದಿದ್ದಲ್ಲಿ, ಮಾಲೀಕನು ನಷ್ಟಭರ್ತಿ ಮಾಡಬೇಕೆಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ಅಲ್ಲದೆ, ಬದ್ಧತೆಯು ಮೋಟಾರು ವಾಹನ ಅಧಿನಿಯಮದ 146ನೇ ಪ್ರಕರಣದೊಂದಿಗೆ ಯಾವಾಗಲೂ ಸಹ ವ್ಯಾಪ್ತವಾಗಿರುತ್ತದೆ ಮತ್ತು ವಿಮಾ ಪಾಲಿಸಿಯು ಮೋಟಾರು

ವಾಹನ ಅಧಿನಿಯಮದ ಉಪಬಂಧಗಳನ್ನು ನಿರ್ದಿಷ್ಟವಾಗಿ, ನೋಂದಣಿಗೆ ಸಂಬಂಧಿಸಿದಂತೆ ಅನುಸರಿಸದಿದ್ದಲ್ಲಿ, ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪನ್ನು ಮತ್ತು ಐತೀರ್ಪನ್ನು ಮಾರ್ಪಾಡುಗೊಳಿಸಿ, ನ್ಯಾಯಾಧಿಕರಣವು ನಷ್ಟಭರ್ತಿ ಮಾಡಲು ವಿಮಾಕಂಪನಿಗೆ ನಿರ್ದೇಶನಗಳನ್ನು ಕೊಟ್ಟಿರುವ ಐತೀರ್ಪು ರದ್ದುಗೊಳಿಸಲು ತಕ್ಕುದ್ದಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.

8. ಇದಕ್ಕೆ ಪ್ರತಿಯಾಗಿ, ಗಾಯಗೊಂಡ ಕ್ಲೇಮುದಾರರ ಪರ ಹಾಜರಾದ ಮಾನ್ಯ ವಕೀಲರು, ಎಲ್ಲಾ ಶೀರ್ಷಿಕೆಗಳಡಿಯಲ್ಲಿ ನ್ಯಾಯಾಧಿಕರಣವು ಐತೀರ್ಪು ನೀಡಿರುವ ಪರಿಹಾರವು ಕಡಿಮೆ ಪ್ರಮಾಣದ್ದಾಗಿದ್ದು, ನಿಶಾನೆ–7ರ ಪ್ರಕಾರ ಗಾಯಗೊಂಡ ಕ್ಲೇಮುದಾರರು 28 ವರ್ಷ ವಯೋಮಾನದವರಾಗಿದ್ದು, ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ತಿಂಗಳಿಗೆ 6,000/– ರೂ.ಗಳಷ್ಟು ಸಂಬಳವನ್ನು ಪಡೆಯುತ್ತಿರುತ್ತಾರೆ. ಅಪಘಾತಕ್ಕೆ ಮೊದಲು ಆರೋಗ್ಯವಂತರಾಗಿದ್ದು, ರಸ್ತೆ ಅಪಘಾತದಿಂದ ಉಂಟಾದ ಗಂಭೀರ ಸ್ವರೂಪದ ಗಾಯಗಳು ಮತ್ತು ಅಂಗವಿಕಲತೆ ಉಂಟಾಗಿರುತ್ತದೆ. ಈಕೆ ಸಾಕಷ್ಟು ಬಾರಿ ಆಸ್ಪತ್ರೆಗೆ ದಾಖಲಾಗಿದ್ದು, ಇದು ಒಟ್ಟು ಸುಮಾರು 111 ದಿನಗಳಷ್ಟರ ಅವಧಿಯದಾಗಿರುತ್ತದೆ. ಈಕೆ ವೈದ್ಯಕೀಯ ಮತ್ತು ಇತರ ವೆಚ್ಚಗಳ ಜೊತೆಗೆ ಸಾರಿಗೆಗಾಗಿ, ಪೌಷ್ಠಿಕವಾದ ಆಹಾರ ಮತ್ತು ಶುಶ್ರೂಷೆಗಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ನ್ಯಾಯಾಧಿಕರಣವು, ಆಕೆಯ ದೇಹವು ಶೇ.70ರಷ್ಟು ಅಂಗವಿಕಲತೆಯನ್ನು ಹೊಂದಿರುತ್ತೆಂದು ನಿರ್ಧರಿಸಿ ತಪ್ಪನ್ನು ಎಸಗಿರುತ್ತದೆ. ಆದರೆ ತನ್ನ ತೀರ್ಪಿನ 22ನೇ ಆಂತರಿಕ ಪುಟದ 29ನೇ ಕಂಡಿಕೆಯಲ್ಲಿ ಶೇ.100ರಷ್ಟು ಗಳಿಕೆಯ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತಾರೆಂಬ ತೀರ್ಮಾನಕ್ಕೆ ಸಹ ಬಂದಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ನ್ಯಾಯಾಧಿಕರಣವು ಭವಿಷ್ಯದ ವೈದ್ಯಕೀಯ ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲವೆಂದು ನಿವೇದಿಸಿರುತ್ತಾರೆ. ಆದ್ದರಿಂದ ಮೇಲಿನ ಎಲ್ಲಾ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು, ಗಾಯಗೊಂಡ ಕ್ಲೇಮುದಾರಳ, ಇಡೀ ದೇಹದ ಅಂಗವೈಕಲ್ಯವನ್ನು ಮರುನಿರ್ಧರಣೆ ಮಾಡಿ, ತರುವಾಯ ನ್ಯಾಯಾಧಿಕರಣವು

ಹೊರಡಿಸಿರುವ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಮಾರ್ಪಾಟು ಮಾಡಿ, ಆಕೆಗೆ ಪರಿಹಾರವನ್ನು ನ್ಯಾಯಯುತವಾಗಿ ಮಾತ್ರ ಯುಕ್ತವಾಗಿ ಹೆಚ್ಚಿಸಬೇಕಾಗಿರುವುದಕ್ಕೆ ಆಕೆಯು ಹಕ್ಕುಳ್ಳವಳಾಗಿರುತ್ತಾಳೆಂದು ನಿವೇದಿಸಿಕೊಂಡಿರುತ್ತಾರೆ.

ಮುಂದುವರೆದು, ನ್ಯಾಯಾಧಿಕರಣವು ವಿಮಾಕಂಪನಿಗೆ ನಷ್ಟಭರ್ತಿಗಾಗಿ ನಿರ್ದೇಶನಗಳನ್ನು ನೀಡಿರುವ ಐತೀರ್ಪಿಗೆ ಸಂಬಂಧಿಸಿದಂತೆ, ಇವರು, ನ್ಯಾಯಾಧಿಕರಣವು ಕಡತದಲ್ಲಿ ಲಭ್ಯವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯಗಳನ್ನು ಕಟ್ಟುನಿಟ್ಟಾಗಿ ಮೌಲ್ಯಮಾಪನ ಮಾಡಿದ ತರುವಾಯ, ವಿವಿಧ ಸಂದರ್ಭಗಳನ್ನು ಪರಿಗಣಿಸಿ, ವಿಮಾಕಂಪನಿಯು ನಷ್ಟಭರ್ತಿ ಮಾಡಲು ಬದ್ಧವಾಗಿರುತ್ತದೆಂದು ಅಭಿಪ್ರಾಯಪಟ್ಟು ವಾಸ್ತವಾಂಶದ ನಿರ್ದಿಷ್ಟ ನಿರ್ಣಯವನ್ನು ದಾಖಲು ಮಾಡಿರುತ್ತದೆಂದು ಬಾಪ್ಪೋಗ್ವೇದದಿಂದ, ನಿವೇದಿಸಿಕೊಂಡಿರುತ್ತಾರೆ. ಆದಾಗ್ಯೂ, ವಿಮಾ ಪಾಲಿಸಿಯ ನಿಬಂಧನೆ ಮತ್ತು ಷರತ್ತುಗಳ ಉಲ್ಲಂಘನೆಯಲ್ಲಿ, ಐತೀರ್ಪು ನೀಡಿದ ಮೊಬಲಗಿನ ವಸೂಲಿಗೆ ಸಂಬಂಧಿಸಿದಂತೆ ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕನ ವಿರುದ್ಧ ಯುಕ್ತ ಕ್ರಮಕೈಗೊಳ್ಳುವುದಕ್ಕೆ ವಿಮಾಕಂಪನಿಯು ಮುಕ್ತವಾಗಿರುತ್ತದೆ ಮತ್ತು ಅಪಘಾತಕ್ಕೆ ಮೂರನೇ ಪಕ್ಷಕಾರರಾಗಿರುವ ಗಾಯಗೊಂಡ ಕ್ಲೇಮುದಾರರಿಗೆ ಆಕೆಗಾದ ಗಂಭೀರ ಸ್ವರೂಪದ ಗಾಯಗಳು ಮತ್ತು ಅಂಗವೈಕಲ್ಯಕ್ಕೆ ಸಂಬಂಧಿಸಿದಂತೆ ಬರಬೇಕಾದ ಕಾನೂನುಸಮ್ಮತ ಪರಿಹಾರವನ್ನು ತಪ್ಪಿಸಬಾರದು ಮತ್ತು ಯುಕ್ತ ಪರಿಹಾರಕ್ಕಾಗಿ ಆಕೆ ಅಲೆಯುವಂತೆ ಮಾಡಬಾರದು ಎಂದು ವಾದಿಸಿರುವುದು ನ್ಯಾಯಯುತವಾಗಿರುತ್ತದೆ. ವಿಷಯದ ಈ ಆಯಾಮವು, ಅಧಿನಿಯಮದ 149(7) ಪ್ರಕರಣದಡಿಯಲ್ಲಿ ಉದ್ದೇಶಿಸಿರುವಂತೆ ನ್ಯಾಯಾಧಿಕರಣವು ಪರಿಗಣಿಸಿರುವುದು ಸರಿಯಾಗಿಯೇ ಇರುತ್ತದೆ. ಆದ್ದರಿಂದ ನ್ಯಾಯಾಧಿಕರಣವು ನೀಡಿರುವ ಸದರಿ ನಿರ್ದೇಶನದಲ್ಲಿ ಈ ನ್ಯಾಯಾಲಯವು ಮಧ್ಯಪ್ರವೇಶಿಸುವುದು ಯುಕ್ತವಾಗಿರುವುದಿಲ್ಲ.

9. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ವಕೀಲರ ನಿವೇದನೆಯನ್ನು ಎಚ್ಚರಿಕೆಯಿಂದ ಪರಿಗಣಿಸಿದ ಮೇಲೆ, ನ್ಯಾಯಾಧಿಕರಣವು ಹೊರಡಿಸಿರುವ ಪ್ರಶ್ನಿತ

ತೀರ್ಪು ಮತ್ತು ಐತೀರ್ಪಿನ ಪರಿಶೀಲನೆಯ ತರುವಾಯ ಮತ್ತು ಕಡತದ ಮೇಲೆ ಲಭ್ಯವಾದ ಮೂಲ ದಾಖಲೆಗಳ ಮೌಲ್ಯನಿರ್ಣಯದ ತರುವಾಯ, ಈ ಎರಡೂ ಅಪೀಲುಗಳಲ್ಲಿ ನಮ್ಮ ಪರಿಗಣನೆಗಾಗಿ ಉದ್ಭವಿಸಿರುವ ಅಂಶಗಳು ಈ ಮುಂದಿನಂತಿವೆ:

**i) ನ್ಯಾಯಾಧಿಕರಣವು, ನಷ್ಟವನ್ನು ತುಂಬಿಕೊಡಲು ವಿಮಾಕಂಪನಿಗೆ ನಿರ್ದೇಶಿಸಿ ನೀಡಿರುವ ಐತೀರ್ಪು ಸಮರ್ಥನೀಯವಾಗಿದೆಯೇ?**

**ii) ನ್ಯಾಯಾಧಿಕರಣವು ಐತೀರ್ಪು ನೀಡಿರುವ ಪರಿಹಾರದ ಪ್ರಮಾಣವು ನ್ಯಾಯಯುತವು ಮತ್ತು ಯುಕ್ತವಾದುದು ಆಗಿದೆಯೇ?**

10. **ಪುನರವಲೋಕನ ಅಂಶ–I**: ಕಡತದಲ್ಲಿ ಲಭ್ಯವಾಗುವ ಪೂರ್ಣ ವಿಷಯವನ್ನು ಪರಿಶೀಲಿಸಿದ ತರುವಾಯ, ಅಪಘಾತವು ಸಂಭವಿಸಿದ ಮತ್ತು ಗಾಯಗೊಂಡ ಕ್ಲೇಮುದಾರರಿಗೆ ಗಂಭೀರ ಸ್ವರೂಪದ ಗಾಯಗಳೂಂಟಾದವು ಎಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲವೆಂಬುದು ಕಂಡುಬಂದಿರುತ್ತದೆ. ಮುಂದುವರೆದು, ಅಪರಾಧಕ್ಕೆ ಗುರಿಯಾಗಿರುವ ವಾಹನಕ್ಕೆ ವಿಮಾಕಂಪನಿಯಲ್ಲಿ ಯುಕ್ತವಾಗಿಯೇ ವಿಮೆ ಮಾಡಿಸಲಾಗಿರುತ್ತದೆ ಮತ್ತು ಇದು ಅಪಘಾತವುಂಟಾಗುವ ಮುಂಚಿನ ಸ್ವಲ್ಪ ದಿನಗಳವರೆಗೂ ಚಾಲ್ತಿಯಲ್ಲಿತ್ತೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಆದರೆ, ತಾತ್ಕಾಲಿಕ ನೋಂದಣಿಯು 30 ದಿನಗಳ ಅವಧಿಯವರೆಗೂ ಮಾತ್ರವೇ ಸಿಂಧುವಾಗಿರುತ್ತದೆ ಮತ್ತು ಅದು ಅಪಘಾತ ಸಂಭವಿಸುವುದಕ್ಕೆ ಸ್ವಲ್ಪ ಮೊದಲೇ ರದ್ದಾಗಿರುತ್ತದೆಂಬುದು ವಿಮಾಕಂಪನಿಯ ನಿರ್ದಿಷ್ಟ ವಾದವಾಗಿರುತ್ತದೆ. ಮುಂದುವರೆದು, ಗಾಯಗೊಂಡ ಕ್ಲೇಮುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಯು, ನ್ಯಾಯಾಧಿಕರಣವು, ಕಡತದ ಮೇಲೆ ಲಭ್ಯವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಯುಕ್ತ ಪರಿಶೀಲನೆಯ

ತರುವಾಯ, ವಿಮಾ ಕಂಪನಿಗೆ ನಷ್ಟವನ್ನು ತುಂಬಿಕೊಡಲು ನಿರ್ದೇಶಿಸುವ ಐತೀರ್ಪನ್ನು ನೀಡಿರುವುದು ಸರಿಯಾದುದಾಗಿದೆಯೆಂದು ವಾದಿಸಿರುವುದು ಸಮಂಜಸವಾಗಿಯೇ ಇದೆ. ಆದಾಗ್ಯೂ, ವಿಮಾಕಂಪನಿಯು ನೀಡಿದ್ದ ವಿಮಾಪಾಲಿಸಿಯ ನಿಬಂಧನೆ ಮತ್ತು ಷರತ್ತುಗಳ ಉಲ್ಲಂಘನೆಯಾಗಿದ್ದಲ್ಲಿ, ನಂತರ, ಆಪಾದನೆಗೆ ಗುರಿಯಾಗಿದ್ದ ವಾಹನದ ಮಾಲೀಕರ ವಿರುದ್ಧ ವ್ಯಾಜ್ಯ ಹೂಡುವುದಕ್ಕೆ ಇದು ಮುಕ್ತವಾಗಿರುತ್ತದೆ ಮತ್ತು ವಾಹನವು ಅಪಘಾತದ ದಿನಾಂಕದಂದು ಯುಕ್ತವಾಗಿ ನೋಂದಣಿಯಾಗಿರಲಿಲ್ಲವೆಂಬ ಆಧಾರದ ಮೇಲೆ ಗಾಯಗೊಂಡ ಕ್ಲೇಮುದಾರರಿಗೆ ನಷ್ಟಭರಿಸುವುದರಿಂದ ವಿಮಾ ಕಂಪನಿಯು ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು ಸಮರ್ಥನೀಯವಾಗಿರುವುದಿಲ್ಲ. ಮೋಟಾರು ವಾಹನಗಳ ಅಧಿನಿಯಮದ 149(7)ನೇ ಪ್ರಕರಣದ ಸೂಕ್ತ ಉಪಬಂಧದ ಉದ್ಧೃತವನ್ನು ಗಮನಿಸುವುದು ಯುಕ್ತವಾದುದಾಗಿದ್ದು, ಅದು ಈ ಮುಂದಿನಂತಿರುತ್ತದೆ :

"149. ಮೂರನೇ ಪಕ್ಷಕಾರರ ಹೊಣೆಗಳ ಸಂದರ್ಭದಲ್ಲಿ ವಿಮೆ ಮಾಡಿದ ವ್ಯಕ್ತಿಗಳ ವಿರುದ್ಧದ ತೀರ್ಪುಗಳು ಮತ್ತು ಐತೀರ್ಪುಗಳನ್ನು ಪಾಲಿಸುವಾಗ ವಿಮಾಕಂಪನಿಯ ಕರ್ತವ್ಯ.–

(1) ಯಾವ ವ್ಯಕ್ತಿಯ ಹೆಸರಿನಲ್ಲಿ, 147ನೇ ಪ್ರಕರಣದ (3)ನೇ ಉಪಪ್ರಕರಣದಡಿಯಲ್ಲಿ ವಿಮಾಪಾಲಿಸಿಯ ಪ್ರಮಾಣ ಪತ್ರವನ್ನು ನೀಡಿದ ತರುವಾಯ ವಿಮಾ ಪಾಲಿಸಿಯು ಪರಿಣಾಮಕಾರಿಯಾದಲ್ಲಿ, ಯಾವುದೇ---------- ಬದ್ಧತೆಯ ಸಂಬಂಧದಲ್ಲಿ ತೀರ್ಪು ಅಥವಾ ಐತೀರ್ಪನ್ನು, 147ನೇ (ವಿಮಾ ಪಾಲಿಸಿಯ ನಿಬಂಧನೆಗಳಿಂದ ಒಳಗೊಂಡ ಬದ್ಧತೆಯಾಗಿರುವ) ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಡಿಯಲ್ಲಿನ ವಿಮೆಯ ಮೂಲಕ ಒಳಗೊಳ್ಳಬೇಕೆಂದು ಅಗತ್ಯಪಡಿಸಲಾಗಿದೆ.

(2) xx xx xx

(3) xx xx xx

(4) xx xx xx

(5) xx xx xx

(6) xx xx xx

(7) <u>(2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ನೋಟೀಸನ್ನು ನೀಡಲಾಗಿರುವ ಯಾರೇ ವಿಮೆ ನೀಡಿರುವವನು, (1)ನೇ ಉಪಪ್ರಕರಣಕ್ಕೆ ಉಲ್ಲೇಖಿಸಿದ ಯಾವುದೇ ಅಂಥ ತೀರ್ಪು ಅಥವಾ ಐತೀರ್ಪಿನ ಸೌಲಭ್ಯಕ್ಕೆ ಅಥವಾ (2)ನೇ ಉಪಪ್ರಕರಣದಲ್ಲಿ, ಉಪಬಂಧಿಸಿದ ರೀತಿಯನ್ನು ಹೊರತುಪಡಿಸಿ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥ ತೀರ್ಪಿನಲ್ಲಿ ಅಥವಾ ಸಂದರ್ಭಾನುಸಾರ ಪರಸ್ಪರ ಸಂಬಂಧವುಳ್ಳ ದೇಶಗಳ ಸಂವಾದಿ ಕಾನೂನಿನಲ್ಲಿ ಹಕ್ಕುಳ್ಳಂಥ ಯಾರೇ ವ್ಯಕ್ತಿಯು, ತನ್ನ ಬದ್ಧತೆಯನ್ನು ತಪ್ಪಿಸಿಕೊಳ್ಳಲು ಹಕ್ಕುಳವನಾಗಿರತಕ್ಕದ್ದಲ್ಲ.''</u>

(ಅಡಿಗೆರೆ ಎಳೆದಿರುವುದಕ್ಕೆ ನನ್ನಿಂದ ಒತ್ತು ನೀಡಲಾಗಿದೆ)

ಹಾಗಾಗಿ, ವಿಮಾ ಪಾಲಿಸಿಯನ್ನು ನೀಡಿರುವ ವಿಮಾಕಂಪನಿಯು, ಮೂರನೇ ಪಕ್ಷಕಾರರ ಸಂಬಂಧದಲ್ಲಿ ಹೊರಡಿಸಿರುವ ಐತೀರ್ಪಿನ ಬದ್ಧತೆಯಿಂದ ನುಣುಚಿಕೊಳ್ಳುವಂತಿಲ್ಲ. ಆದ್ದರಿಂದ, ಮೇಲೆ ಹೇಳಿದ ಮೋಟಾರು ವಾಹನ ಅಧಿನಿಯಮದ 149(7)ನೇ ಪ್ರಕರಣದ ಉಪಬಂಧಗಳನ್ನೂ ಒಳಗೊಂಡಂತೆ ವಿಷಯದ ಮೇಲಿನ ಎಲ್ಲಾ ಆಯಾಮಗಳನ್ನು ಪರಿಗಣಿಸಿ ಮತ್ತು ಗಾಯಗೊಂಡ ಕ್ಲೇಮುದಾರರ ಪರ ಹಾಜರಾದ ಮಾನ್ಯ ವಕೀಲರು ಸರಿಯಾಗಿಯೇ ಪ್ರಸ್ತಾಪಿಸಿರುವ ವಿಷಯವನ್ನು ಪರಿಗಣಿಸಿ, ನಾವು, ವಿಮಾ ಕಂಪನಿಯು ನಷ್ಟಭರ್ತಿ ಮಾಡುವುದಕ್ಕೆ ಮತ್ತು

ಕಾನೂನಿಗನುಸಾರವಾಗಿ ವಿಮಾಪಾಲಿಸಿಯ ನಿಬಂಧನೆ ಮತ್ತು ಷರತ್ತುಗಳ ಉಲ್ಲಂಘನೆಯಾದಲ್ಲಿ ಮಾಲೀಕರಿಂದ ಅದನ್ನು ವಸೂಲಿ ಮಾಡಿಕೊಳ್ಳಲು ಬದ್ಧವಾಗಿರುತ್ತದೆ ಎಂದು ನಾವು ಅಭಿಪ್ರಾಯಪಟ್ಟಿರುತ್ತೇವೆ. ತದನುಸಾರವಾಗಿ, ಪುನರವಲೋಕನಾಂಶ–1ಕ್ಕೆ ಭಾಗಶಃ ಸಕಾರಾತ್ಮಕವಾಗಿದೆಯೆಂದು ಉತ್ತರಿಸಿರುತ್ತೇವೆ.

11. **<u>ಪುನರವಲೋಕನಾಂಶ–II</u>** : ಗಾಯಗೊಂಡ ಕ್ಲೇಮುದಾರರಿಗೆ ಉಂಟಾದ ಗಾಯಗಳಿಗೆ ಸಂಬಂಧಿಸಿದಂತೆ ನ್ಯಾಯಾಧಿಕರಣವು ನೀಡಿದ ಪರಿಹಾರದ ಪ್ರಮಾಣಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಅಪಘಾತವುಂಟಾಗಿರುವುದು ಮತ್ತು ಇದರಿಂದ ಕ್ಲೇಮುದಾರರಿಗೆ ಗಾಯಗಳುಂಟಾಗಿರುವುದರಲ್ಲಿ ಯಾವುದೇ ವಿವಾದವುಂಟಾಗಿರುವುದಿಲ್ಲವೆಂಬುದನ್ನು ಕಾಣಬಹುದಾಗಿರುತ್ತದೆ. ನ್ಯಾಯಾಧಿಕರಣವು, ಕಡತದ ಮೇಲೆ ಲಭ್ಯವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಕಟ್ಟುನಿಟ್ಟಾದ ಮೌಲ್ಯಮಾಪನದ ತರುವಾಯ, ಗಾಯಗೊಂಡ ಕ್ಲೇಮುದಾರರು ಹಾಜರುಪಡಿಸಿದ ಸಾಕಷ್ಟು ಬಿಲ್ಲುಗಳು ಮತ್ತು ಔಷಧಿ ಚೀಟಿಗಳನ್ನು ಪರಿಗಣಿಸಿ, ಮತ್ತು ಗಂಭೀರ ಸ್ವರೂಪದ ಗಾಯಗಳಿಂದಾಗಿ ಹಾಗೂ ಉಂಟಾದ ಅಂಗವೈಕಲ್ಯದಿಂದಾಗಿ ಗಾಯಗೊಂಡ ಕ್ಲೇಮುದಾರರು ಪಡೆದ ಚಿಕಿತ್ಸೆಯ ಸ್ವರೂಪದ ಮತ್ತು ಅವಧಿಯನ್ನು ಪರಿಗಣಿಸಿ, ಸಾರಿಗೆ, ಪೌಷ್ಟಿಕ ಆಹಾರ ಮತ್ತು ಚಿಕಿತ್ಸಾ ವೆಚ್ಚಗಳಿಗೆ 50,000/– ರೂ.ಗಳನ್ನು; ಗಾಯಗೊಂಡ ಅವಧಿಯಲ್ಲಿ ಆದ ಆದಾಯ ನಷ್ಟಕ್ಕಾಗಿ 80,000/– ರೂ.ಗಳನ್ನು ಮತ್ತು ವೈದ್ಯಕೀಯ ವೆಚ್ಚಗಳಿಗಾಗಿ 1,96,100/– ರೂ.ಗಳ ಐತೀರ್ಪನ್ನು ನೀಡಿರುವುದು ಸರಿಯಾದುದಾಗಿರುತ್ತದೆ. ಹಾಗಾಗಿ ಇದರಲ್ಲಿ ಮಧ್ಯೆಪ್ರವೇಶಿಸುವ ಅವಶ್ಯಕತೆಯಿರುವುದಿಲ್ಲ.

12. ಆದಾಗ್ಯೂ, ಸೌಕರ್ಯಗಳ ನಷ್ಟ, ಅನಾನುಕೂಲ ಮತ್ತು ದುಃಖ, ಗಾಯ, ನೋವು, ಹತಾಶೆ, ಭವಿಷ್ಯದ ಗಳಿಕೆಯಲ್ಲಿನ ನಷ್ಟ, ದಾಂಪತ್ಯ ನಷ್ಟಗಳಿಗೆ ಸಂಬಂಧಪಟ್ಟಂತೆ ಐತೀರ್ಪು ನೀಡಿರುವ ಪರಿಹಾರವು ಕಡಿಮೆ ಪ್ರಮಾಣದ್ದಾಗಿರುತ್ತದೆ ಮತ್ತು ಮರುನಿರ್ಧರಣೆಗೆ ತಕ್ಕುದಾಗಿರುತ್ತದೆ. ಅಲ್ಲದೆ, ಭವಿಷ್ಯದ ವೈದ್ಯಕೀಯ

ವೆಚ್ಚಗಳಿಗಾಗಿ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ಒಪ್ಪಿಕೊಂಡಂತೆ, ರಸ್ತೆ ಸಂಚಾರ ಅಪಘಾತದಿಂದಾಗಿ, ಗಾಯಗೊಂಡ ಕ್ಲೇಮುದಾರರಿಗೆ ಸಿ–5ರ ಮುಂದಣ ಕೆಳಗಣ ತುದಿಪಲಕ ಮತ್ತು ಸಿ–6ರ ದೇಹದ ಮೇಲ್ಭಾಗ ಮುರಿದಿರುತ್ತದೆ, ಸಿ–5ರ ಎಡಪದರವು ಮುರಿದಿರುವುದನ್ನು ಗಮನಿಸಲಾಗಿರುತ್ತದೆ. ದೇಹದ ಸಿ–5ರ ಹಿಂಭಾಗವು, ಗುರಿಯನ್ನು ತೀವ್ರವಾಗಿ ಸಂಕುಚಿತಗೊಳಿಸಿರುತ್ತವೆ. ಎಕ್ಸ್–ರೇ ಪ್ರಕಾರ, ಕೈಕಾಲುಗಳ ಮೇಲಿನ ಮತ್ತು ಕೆಳಗಿನ ಚಲನೆಗಳು ಸರಿಯಾಗಿರುವುದಿಲ್ಲ ಮತ್ತು ಈಕೆ ಎರಡೂ ಕೈಗಳನ್ನು ಎತ್ತಲಾಗದೆ, ಹಾಸಿಗೆಯಿಂದ ಅಲುಗಲೂ ಸಾಧ್ಯವಾಗುವುದಿಲ್ಲ. ಅಲ್ಲದೆ, ಸೊಂಟದ ಕೆಳಭಾಗದ ಎಲ್ಲಾ ಅವಯವಗಳು ಸ್ಪರ್ಶ ಸಂವೇದನೆಯನ್ನು ಒಟ್ಟಾರೆಯಾಗಿ ಕಳೆದುಕೊಂಡಿರುತ್ತವೆಂದು ಹೇಳಲಾಗಿರುತ್ತದೆ. ವೈದ್ಯರು ಇಡೀ ದೇಹವು ಶೇ.100ರಷ್ಟು ಅಂಗವೈಕಲ್ಯ ಹೊಂದಿದೆಯೆಂದು ನಿರ್ಧರಿಸಿರುತ್ತಾರೆ. ಆದರೆ, ವೈದ್ಯರ ಮೌಖಿಕ ಸಾಕ್ಷ್ಯಕ್ಕೆ ವಿರುದ್ಧವಾಗಿ 22ನೇ ಪುಟದ, 29ನೇ ಪ್ಯಾರಾದ ಅವರ ಸ್ವಂತ ಅಭಿಪ್ರಾಯದಲ್ಲಿ, ಇಡೀ ದೇಹದ ಅಂಗವೈಕಲ್ಯವು ಶೇ.70ರಷ್ಟಿರುತ್ತದೆಂದು ಮರುನಿರ್ಧರಿಸಿರುತ್ತಾರೆ. ಇದು ನಮ್ಮ ಅಭಿಪ್ರಾಯದಲ್ಲಿ, ಕಡಿಮೆ ಪ್ರಮಾಣದ್ದಾಗಿರುತ್ತದೆ. ಉಂಟಾಗಿರುವ ಗಾಯಗಳು ಮತ್ತು ಅಂಗವೈಕಲ್ಯದ ಸ್ವರೂಪವನ್ನು ಪರಿಗಣಿಸಿ, ಗಾಯಗೊಂಡ ಕ್ಲೇಮುದಾರರು ಜಡತ್ವದ ಸ್ಥಿತಿಯಲ್ಲಿರುತ್ತಾರೆ. ಆದ್ದರಿಂದ, ನಾವು ಆಕೆಯ ದೇಹದ ಅಂಗವೈಕಲ್ಯವನ್ನು ಶೇ.100ರಷ್ಟು ಎಂದು ಮತ್ತೊಮ್ಮೆ ನಿರ್ಧರಿಸಿ, ನ್ಯಾಯವನ್ನು ನೀಡಲು ಪ್ರಯತ್ನಿಸಿರುತ್ತೇವೆ. ಸುಮಾರು 28 ವರ್ಷ ವಯೋಮಾನದ ಗಾಯಗೊಂಡ ಕ್ಲೇಮುದಾರರು ಆಕೆಯ ಜೀವನದ ಉಳಿದ ಭಾಗವನ್ನು ಈ ಅಂಗವೈಕಲ್ಯದೊಂದಿಗೆ ಅಲ್ಲದೆ, ಸಂಗಾತಿಯಿಲ್ಲದೆ ಕಳೆಯಬೇಕಾಗಿದೆ. ಅಲ್ಲದೆ, ನ್ಯಾಯಾಧಿಕರಣವು 4,000/–ರೂ.ಗಳನ್ನು ಮಾಸಿಕ ಆದಾಯವೆಂದು ನಿರ್ಧರಿಸಿರುವುದು ತುಂಬಾ ಕಡಿಮೆ ಪ್ರಮಾಣದ್ದಾಗಿದ್ದು, ಅದು ಮರುನಿರ್ಧರಣೆಗೆ ಬದ್ಧವಾಗಿರುತ್ತದೆ. ಆದ್ದರಿಂದ, ನಿಶಾನೆ ಪಿ.7ರಲ್ಲಿನ ದಸ್ತಾವೇಜೀಯ ಸಾಕ್ಷ್ಯದೊಂದಿಗೆ ವಯಸ್ಸು, ವೃತ್ತಿ ಮತ್ತು ಅಪಘಾತದ ವರ್ಷಗಳನ್ನು ಪರಿಗಣಿಸಿ, ನಾವು ನ್ಯಾಯವನ್ನು ಒದಗಿಸಲು,

ಗಾಯಗೊಂಡ ಕ್ಲೇಮುದಾರರ ಆದಾಯವನ್ನು 6,000/– ರೂ.ಗಳೆಂದು ಮರುನಿರ್ಧರಣೆ ಮಾಡಿರುತ್ತೇವೆ. ಅಲ್ಲದೆ, ಗಾಯಗೊಂಡ ಕ್ಲೇಮುದಾರರ ವಯಸ್ಸಿಗೆ, ***ಸರಳ ವರ್ಮ*** [1], ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ 17 ಸರಿಯಾಗಿ ಅನ್ವಯಿಸಬಹುದಾದ ಗುಣಕವಾಗಿರುತ್ತದೆ. ಆದ್ದರಿಂದ, ನಾವು ವಯಸ್ಸು, ವೃತ್ತಿ, ಗಾಯಗಳ ಸ್ವರೂಪ, ಶಾಶ್ವತವಾದ ದೈಹಿಕ ಅಂಗವಿಕಲತೆಯನ್ನು ಮರುನಿರ್ಧರಿಸಿ, ಚಿಕಿತ್ಸೆಯ ಸ್ವರೂಪ ಮತ್ತು ಅವಧಿ ಮತ್ತು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ನಾವು, ಭವಿಷ್ಯದ ಆದಾಯ ನಷ್ಟಕ್ಕೆ ಸಂಬಂಧಿಸಿದಂತೆ 5,71,200/– ರೂ.ಗಳಿಗೆ ಪ್ರತಿಯಾಗಿ 12,24,000/– (ಅಂದರೆ 6,000/–x 12 x 17 x 1007) ರೂ.ಗಳನ್ನು, ಗಾಯ, ನೋವು ಮತ್ತು ವೇದನೆಗಳಿಗೆ ಸಂಬಂಧಿಸಿದಂತೆ 1,20,000/– ರೂ.ಗಳಿಗೆ ಪ್ರತಿಯಾಗಿ 1,50,000/– ರೂ.ಗಳನ್ನು; ಸೌಕರ್ಯಗಳು, ತೊಂದರೆಗಳು ಮತ್ತು ದುಃಖಗಳಿಗೆ ಸಂಬಂಧಿಸಿದಂತೆ 50,000/– ರೂ.ಗಳಿಗೆ ಪ್ರತಿಯಾಗಿ 1,00,000/– ರೂ.ಗಳನ್ನು; ದಾಂಪತ್ಯ ನಷ್ಟಕ್ಕೆ ಸಂಬಂಧಿಸಿದಂತೆ 50,000/– ರೂ.ಗಳಿಗೆ ಪ್ರತಿಯಾಗಿ 1,00,000/– ರೂ.ಗಳನ್ನು; ಮತ್ತು ನ್ಯಾಯಾಧಿಕರಣವು ಯಾವುದೇ ಪರಿಹಾರವನ್ನು ನೀಡದ ವೈದ್ಯಕೀಯ ವೆಚ್ಚಗಳು ಎಂಬ ಶೀರ್ಷಿಕೆಯಡಿಯಲ್ಲಿ 1,00,000/– ರೂ.ಗಳನ್ನು ನೀಡಿರುತ್ತೇವೆ.

13. ಆದಾಗ್ಯೂ, ಕೆಲಸದ ನಷ್ಟಕ್ಕೆ ಸಂಬಂಧಿಸಿದಂತೆ ನ್ಯಾಯಾಧಿಕರಣವು ನೀಡಿದ 25,000/– ರೂ.ಗಳ ಮೊಬಲಗನ್ನು ಗಾಯಗೊಂಡ ಕ್ಲೇಮುದಾರರು, ಅನುಭವಿಸುತ್ತಿರುವ ಶೇ.100ರಷ್ಟು ಅಂಗವಿಕಲತೆಯ ಕಾರಣದಿಂದ ಅವರ ಭವಿಷ್ಯದ ಆದಾಯ ಗಳಿಕಾ ಸಾಮರ್ಥ್ಯ ನಷ್ಟಕ್ಕೆ ಸಂಬಂಧಿಸಿದಂತೆ ಯುಕ್ತ ಪರಿಹಾರವನ್ನು ಗಾಯಗೊಂಡ ಕ್ಲೇಮುದಾರರಿಗೆ ನೀಡಲಾಗಿದೆಯೆಂಬ ಕಾರಣಕ್ಕಾಗಿ ಪರಿಗಣಿಸಲಾಗುವುದಿಲ್ಲ. ಹಾಗಾಗಿ, ನ್ಯಾಯಾಧಿಕರಣವು ಐತೀರ್ಪು ನೀಡಿದ ಸದರಿ ಮೊಬಲಗನ್ನು ರದ್ದುಪಡಿಸಲಾಗಿರುತ್ತದೆ.

1. 2009 ಎಸಿಜೆ 1298

14. ಹಾಗಾಗಿ, ನ್ಯಾಯಾಧಿಕರಣವು ಐತೀರ್ಪು ನೀಡಿರುವ 11,42,300/– ರೂ.ಗಳಿಗೆ ಪ್ರತಿಯಾಗಿ 20,00,100/– ರೂ.ಗಳನ್ನು ಒಟ್ಟು ಪರಿಹಾರವೆಂದು ಲೆಕ್ಕಹಾಕಲಾಗಿರುತ್ತದೆ. ಅರ್ಜಿ ಸಲ್ಲಿಸಿದ ದಿನಾಂಕದಿಂದ, ತೀರ್ಪು ಜಾರಿಗೆ ಬರುವ ದಿನಾಂಕದವರೆಗೂ ವಾರ್ಷಿಕ ಶೇ.6ರಷ್ಟು ಬಡ್ಡಿ ದರದೊಂದಿಗೆ 8,57,800/– ರೂ.ಗಳ ಮೊಬಲಗಿನ ಪರಿಹಾರವನ್ನು ಹೆಚ್ಚಿಸಲಾಗಿರುತ್ತದೆ. ತದನುಸಾರವಾಗಿ, ನಾವು ಪರಿಶೀಲನಾಂಶ ಸಂ. IIಕ್ಕೆ ನಕಾರಾತ್ಮಕವಾಗಿ ಉತ್ತರಿಸಿ, ಮೇಲೆ ಹೇಳಿರುವ ಹೆಚ್ಚುವರಿ ಪರಿಹಾರವನ್ನು ನೀಡಿರುತ್ತೇವೆ.

15. ಮೇಲೆ ಹೇಳಿದ, ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಮೇಲೆ ಹೇಳಿದಂತೆ, ವಿಮಾಕಂಪನಿಯು ಸಲ್ಲಿಸಿದ ಅಪೀಲನ್ನು ಮತ್ತು ಗಾಯಗೊಂಡ ಕ್ಲೇಮುದಾರರು ಸಲ್ಲಿಸಿದ ಅಪೀಲನ್ನು ಭಾಗಶಃವಾಗಿ ಅಂಗೀಕರಿಸಿರುತ್ತೇವೆ.

IIIನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಬೆಂಗಳೂರು ಇವರು, ಎಂ.ವಿ.ಸಿ. ಸಂ. 4979/2008ರಲ್ಲಿ 2010ರ ಜೂನ್ 17ರಂದು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಈ ಮೂಲಕ ಮಾರ್ಪಾಡುಗೊಳಿಸಲಾಗಿರುತ್ತದೆ.

11,42,300/– ರೂ.ಗಳೆಂದು ನ್ಯಾಯಾಧಿಕರಣವು ಐತೀರ್ಪು ನೀಡಿದ್ದ ಪರಿಹಾರವನ್ನು, ಅರ್ಜಿ ಸಲ್ಲಿಸಿದ ದಿನಾಂಕದಿಂದ ತೀರ್ಪು ಜಾರಿಗೆ ಬರುವ ದಿನಾಂಕದವರೆಗೂ, ವಾರ್ಷಿಕ ಶೇ.6ರಷ್ಟು ಬಡ್ಡಿ ದರದೊಂದಿಗೆ 20,00,100/– ರೂ.ಗಳಿಗೆ ಹೆಚ್ಚಿಸಲಾಗಿರುತ್ತದೆ.

ವಿಂಗಡಣೆಗಳು ಈ ಮುಂದಿನಂತಿರುತ್ತವೆ :

| | |
|---|---|
| ನೋವು ಮತ್ತು ವೇದನೆಗಳಿಗೆ ಸಂಬಂಧಿಸಿದಂತೆ | ರೂ. 1,50,000/– |
| ಅಂಗವೈಕಲ್ಯದ ಕಾರಣದಿಂದ ಜೀವನದಲ್ಲಿ ಸೌಲಭ್ಯಗಳು ಮತ್ತು ಅನುಭೋಗದ ನಷ್ಟಕ್ಕೆ ಸಂಬಂಧಿಸಿದಂತೆ | ರೂ. 1,00,000/– |
| ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದಂತೆ | ರೂ. 1,96,100/– |
| ಸಾರಿಗೆ, ಪೌಷ್ಠಿಕ ಆಹಾರ ಮತ್ತು ವೈದ್ಯೋಪಚಾರ ವೆಚ್ಚಗಳಿಗೆ ಸಂಬಂಧಿಸಿದಂತೆ | ರೂ. 50,000/– |
| ಚಿಕಿತ್ಸಾ ಅವಧಿಯಲ್ಲಿ ಗಳಿಕೆಯ ನಷ್ಟಕ್ಕೆ ಸಂಬಂಧಿಸಿದಂತೆ | ರೂ. 80,000/– |
| ಭವಿಷ್ಯದ ಗಳಿಕೆಗಳ ನಷ್ಟಕ್ಕೆ ಸಂಬಂಧಿಸಿದಂತೆ | ರೂ. 12,24,000/– |
| ದಾಂಪತ್ಯ ನಷ್ಟಕ್ಕೆ ಸಂಬಂಧಿಸಿದಂತೆ | ರೂ. 1,00,000/– |
| ಭವಿಷ್ಯದ ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದಂತೆ | ರೂ. 1,00,000/– |
| **ಒಟ್ಟು** | **ರೂ. 20,00,100/–** |

ಗಾಯಗೊಂಡ ಕ್ಲೇಮುದಾರರು, ನ್ಯಾಯಾಧಿಕರಣವು ಐತೀರ್ಪು ನೀಡಿರುವ ಪರಿಹಾರಕ್ಕೆ ಹೆಚ್ಚುವರಿಯಾಗಿ, ಅರ್ಜಿ ಸಲ್ಲಿಸಿದ ದಿನಾಂಕದಿಂದ ತೀರ್ಪು ಜಾರಿಗೆ ಬರುವ ದಿನಾಂಕದವರೆಗೆ ಶೇ.6ರಷ್ಟು ಬಡ್ಡಿ ದರದೊಂದಿಗೆ 8,57,800/– ರೂ.ಗಳ ಮೊಬಲಗಿಗೆ ಹಕ್ಕುಳ್ಳವರಾಗಿರುತ್ತಾರೆಂದು ಅಭಿಪ್ರಾಯಪಡಲಾಗಿರುತ್ತದೆ.

ನ್ಯಾಯಾಧಿಕರಣವು, ನಷ್ಟಭರ್ತಿಗೆ ಸಂಬಂಧಿಸಿದಂತೆ ನೀಡಿರುವ ನಿರ್ದೇಶನವನ್ನು, ವಿಮಾಕಂಪನಿಗೆ ಮೊದಲು ಸಂದಾಯ ಮಾಡಿ, ತರುವಾಯ ಅದನ್ನು ಇದೇ ನಡಾವಳಿಗಳಲ್ಲಿ, ಹಾಗೆ, ಸೂಚಿಸಿದಲ್ಲಿ, ಕಾನೂನಿಗನುಸಾರವಾಗಿ, ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕನಿಂದ ವಸೂಲಿ ಮಾಡಿಕೊಳ್ಳುವಂತೆ ನಿರ್ದೇಶಿಸಿ, ಈ ಮೂಲಕ ಮಾರ್ಪಾಡುಗೊಳಿಸಿರುತ್ತದೆ.

ತದನುಸಾರವಾಗಿ, ಈ ತೀರ್ಪಿನ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವಾರಗಳ ಅವಧಿಯೊಳಗೆ, ವಿಮಾಕಂಪನಿಯು ಠೇವಣಿ ಮಾಡಿದ್ದಲ್ಲಿ ಪರಿಹಾರವನ್ನು ಕಡಿತಗೊಳಿಸಿದ ತರುವಾಯ, ಬಡ್ಡಿಯೊಂದಿಗೆ ಒಟ್ಟು ಪರಿಹಾರವನ್ನು ಠೇವಣಿ ಇಡಲು ವಿಮಾಕಂಪನಿಗೆ ನಿರ್ದೇಶಿಸಲಾಗಿರುತ್ತದೆ.

8,57,800/- ರೂ.ಗಳ ಹೆಚ್ಚಿಸಲಾದ ಪರಿಹಾರದ ಪೈಕಿ, 6,50,000/- ರೂ.ಗಳ ಮೊಬಲಗನ್ನು ಅದರ ಪ್ರಮಾಣಾನುಸಾರ ಬಡ್ಡಿಯೊಂದಿಗೆ, ಗಾಯಗೊಂಡ ಕ್ಲೇಮುದಾರರು, ಆ ಮೊಬಲಗಿನ ನಿಯತಕಾಲಿಕ ಬಡ್ಡಿಯನ್ನು ಪಡೆದುಕೊಳ್ಳುವ ಅವಕಾಶದೊಂದಿಗೆ ಹತ್ತು ವರ್ಷಗಳ ಅವಧಿಗೆ ಮತ್ತು, ವಿಸ್ತರಿಸಬಹುದಾದ ಮತ್ತೊಂದು ಹತ್ತು ವರ್ಷಗಳ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ಯಾವುದೇ ರಾಷ್ಟ್ರೀಕೃತ ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಗಾಯಗೊಂಡ ಕ್ಲೇಮುದಾರರ ಹೆಸರಿನಲ್ಲಿ ಠೇವಣಿ ಇಡತಕ್ಕದ್ದು.

ಉಳಿದ 2,07,800/- ರೂ.ಗಳ ಮೊಬಲಗನ್ನು ವಿಮಾ ಕಂಪನಿಯು ಠೇವಣಿ ಮಾಡಿದ ಮೇಲೆ, ಗಾಯಗೊಂಡ ಕ್ಲೇಮುದಾರರ ಹೆಸರಿನಲ್ಲಿ, ಪ್ರಮಾಣಾನುಸಾರವಾದ ಬಡ್ಡಿಯೊಂದಿಗೆ ಬಿಡುಗಡೆ ಮಾಡತಕ್ಕದ್ದು.

ವಿಮಾಕಂಪನಿಯು ಠೇವಣಿ ಮಾಡುವ ಶಾಸನಾತ್ಮಕ ಮೊಬಲಗನ್ನು, ಈ ಕೂಡಲೇ ಅಧಿಕಾರ ವ್ಯಾಪ್ತಿಯಿರುವ ನ್ಯಾಯಾಧಿಕರಣಕ್ಕೆ ರವಾನಿಸತಕ್ಕದ್ದು.

ತದನುಸಾರವಾಗಿ, ಐತೀರ್ಪನ್ನು ಪಡೆಯಲು ಕಚೇರಿಗೆ ನಿರ್ದೇಶಿಸಲಾಗಿರುತ್ತದೆ.

---